ತಾಯಿಯಾದ ನನ್ನ ವರ್ತನೆ ಶಾಕ್ ತಂದಿರುವುದರಲ್ಲಿ ಆಶ್ಚರ್ಯವೇನು ಇಲ್ಲ...

'ಮೀರಾ... ನೀನು ಕಾರಿನಲ್ಲಿ ಹೋಗಿ ಕುಳಿತುಕೋ. ನಾನು ಈಗ ಬಂದೆ...' ಮೆಲ್ಲನೆ ಹೇಳಿದೆ... ಒಂದು ಹೆಜ್ಜೆ ಇಟ್ಟರೆ ಇನ್ನೊಂದು ಹೆಜ್ಜೆ ಇಡುವ ಧೈರ್ಯ ತಾನಾಗೇ ಮಾಡುತ್ತದೆ.

ಮೀರಾ ಬಾಗಿಲವರೆಗೂ ಹೋದವಳು ಅಲ್ಲೇ ನಿಂತಳು.....

ಇವರನ್ನು ಬಿಟ್ಟು ಹೋಗುವುದು ಇಡೀ ಪ್ರಪಂಚಕ್ಕೆ ಗೊತ್ತಾಗುತ್ತದೆ... ಇವಳು ಇಲ್ಲೇ ಇದ್ದರೇನು?.

'ಏನಾಯ್ತ್ರೀ?.... ನಿಮ್ಮ ಯಜಮಾನರು ಏನಾದ್ರು ಅಂದ್ರಾ?... ಆ ಮನೆಯ ಗೃಹಲಕ್ಷ್ಮೀ ನೀವು.. ನಿಮ್ಮನ್ನು ಕಂಡ್ರೆ ಪ್ರೀತಿ ಇಲ್ಲದೇ ಇರುತ್ತೇನ್ರೀ?.. ನಿಮ್ಗೆ ಇವತ್ತು ಆಯಾಸ ಆಗಿದೆ... ರಾತ್ರಿ ಒಂದೇ ಒಂದು ನಿದ್ದೆ ಮಾತ್ರೆ ತೊಗೊಂಡು ಮಲ್ಕೊಳ್ಳಿ ಎಲ್ಲಾ ಸರಿಹೋಗುತ್ತೆ... '

ತಲೆಯೆತ್ತಿ ಅವನತ್ತ ನೋಡಿದೆ.... ಅವನೆದೆಯಲ್ಲಿ ನನ್ನ ಮುಖವಿಟ್ಟಾಗ ಅವನ ಎದೆಬಡಿತ ಏರಿದ್ದು ಸುಳ್ಳೇ?... ಅವನ ಕಂಗಳಲ್ಲಿ ನನಗೆ ಕಾಣುತ್ತಿರುವ ಪ್ರೀತಿ ನನ್ನ ಕಂಗಳಲ್ಲಿ ಅವನಿಗೆ ಕಾಣಿಸುತ್ತಿಲ್ಲವೇ?...

'ಒಂದಲ್ಲ... ಈಗ ಮೂರು ಮಾತ್ರೆ ನುಂಗುತ್ತೇನೆ ನಿದ್ರೆ ಮಾಡಲು... ಅದು ನಿದ್ದೆಯಲ್ಲ... ನಿದ್ದೆಯ ಮತ್ತು!... ಮಾತ್ರೆಗಳಿಂದ ಕೆಲಗಂಟೆಗಳ ಕಾಲ ಆವರಿಸುವ ಸಾವು... ಆದರೆ ಮತ್ತೆ... ಬೆಳಗಾಗುತ್ತದೆ... ಮತ್ತು ಇಳಿಯುತ್ತದೆ... ಬದಲಾವಣೆಯೇ ಇಲ್ಲ... ಅದೇ ಪ್ರೀತಿಯಿಲ್ಲದ ಜೀವನ... ಯಾರಿಗೂ ಬೇಡದ ಜೀವ... ಒಮ್ಮೆ... ತೆಗೆದುಕೊಂಡು ಬಿಡಬೇಕು.. ಒಂದೈವತ್ತು ಮಾತ್ರೆ... ಸಾವಿನಂಥ ನಿದ್ರೆಯ ಮತ್ತು ಇಳಿಯುವುದೇ ಇಲ್ಲವೇನೋ...' ಸನಿಹ ಬಂದ ವಿಶ್ವಾಸ್..

'ಹುಶ್ಶ್... ಯಾಕಿಷ್ಟು ಹುಚ್ಚುಚ್ಚಾಗಿ ಮಾತಾಡ್ತಾ ಇದೀರಿ..?'

'ನಂಗೆ ಮನೆಯಲ್ಲಿ ಉಸಿರು ಕಟ್ಟಿದಂತೆ ಆಗುತ್ತಿದೆ... ಬಿಟ್ಟುಕೊಟ್ಟು ಕೊಟ್ಟೂ ಸಾಕಾಗಿದೆ... ಹೊಂದಿಕೊಂಡು, ಬಾಗಿ ಬಾಗಿ ರೋಸಿಹೋಗಿದೆ... ಇಷ್ಟೇ ಜೀವನವೆಂದರೆ ನನಗೆ ಬೇಡ ಎನ್ನಿಸಿದೆ... ಅಭಿಪ್ರಾಯಕ್ಕೆ, ಭಾವನೆಗೆ ಬೆಲೆಯೇ ಇಲ್ಲದ ಕಡೆ ಇರುವುದು ಅಸಹನೀಯವಾಗಿದೆ...'

ನನ್ನ ದನಿ ಏರುತ್ತಲೇ ಹೋಯಿತು...

'ಹೋಗ್ತ್ಯಾ?... ಎಲ್ಲಿಗೆ ಹೋಗ್ತ್ಯಾ?. ಏನು ಮಾಡ್ತ್ಯಾ? ಎಂದು ಇವರು ಕೇಳುವ ವ್ಯಂಗ್ಯ ಪ್ರಶ್ನೆ ನನ್ನ ಇರಿಯುತ್ತದೆ... ಈ ಅಸಹಾಯಕ ಬದುಕು ನನಗೆ ಬೇಡ, ನಾನು ಬದುಕಿ ತೋರಿಸಬೇಕು... ಇವರ ಹಂಗಿಲ್ಲದೆ. ಹಳ್ಳಿಮನೆ ಕುಟುಂಬದ ಸೊಸೆ ಎಂಬ ನಾಮಾಂಕಿತವಿಲ್ಲದೆ ಬದುಕುಬೇಕು...'

' ಇದೆಲ್ಲಾ ಒಪ್ಪುತ್ತೇನೆ... ಇಲ್ಲಿ ನನ್ನ ಪಾತ್ರವೇನು?...' ನಿಟ್ಟುಸಿರಿಟ್ಟೆ. ಅವನ ಪ್ರಶ್ನೆ. ಉಗುಳು ನುಂಗಿ ಅವನತ್ತ ನೋಡಿದೆ... ಅವನ ಕಂಗಳಲ್ಲಿ ಕಾಣುತ್ತಿರುವ ಪ್ರೀತಿಯೇ?.. ಕರುಣೆಯೇ?.. ಗೊಂದಲವೇ?...

'ಗೊತ್ತಿಲ್ಲ... ನಿಮ್ಮ ಬಳಿ ಹೇಳಿಕೊಳ್ಳಬೇಕು ಎಂದನ್ನಿಸಿತು... ನಿಮ್ಮ ಮಾತುಕತೆ ನನಗೆ ಬಹಳ ಇಷ್ಟವಾಗಿದೆ... ನಾನು ಡೋಲಾಯಮಾನ ಸ್ಥಿತಿಯಲ್ಲಿ ಇರುವ ಈ ಸಮಯದಲ್ಲಿ ನೀವು, ನಿಮ್ಮ ಮಾತು.. ನನ್ನ ಮನಸ್ಸಿಗೆ ಹಿತವನ್ನು ಸ್ಥೈರ್ಯವನ್ನು...'

'ಪ್ಲೀಸ್... ಈ ಸುತ್ತು ಬಳಸಿ ಮಾತು ಬೇಡ... ನಿಮ್ಮ ಮನಸ್ಸಿನಲ್ಲಿ ಏನಿದೆ ಅದನ್ನು ಧೈರ್ಯವಾಗಿ ಹೇಳಿ... ನಿಮ್ಮ ಕಂಗಳಲ್ಲಿ ನಾನು ಕಾಣುತ್ತಿರುವ ಪ್ರೀತಿ ನಿಜವೇ?.. ಅಥವಾ ಅದು ನನ್ನ ಭ್ರಮೆಯೇ?...'

'ವಿಶ್ವಾಸ್...'

'ಅಥವಾ ಒಬ್ಬರೇ ಎಲ್ಲಿಗೆ ಹೋಗುವುದು?.. ಏನು ಮಾಡುವುದು ಎಂಬ ನಿಮ್ಮ ಗೊಂದಲಕ್ಕೆ ನಾನು ಪರಿಹಾರವೇ?'

ಹೃದಯಕ್ಕೆ ಚುಚ್ಚಿತ್ತು ಅವನ ಮಾತು... ಅವನಿಂದ ಏನನ್ನು ಮುಚ್ಚಿಡುವುದು ಅಸಾಧ್ಯ... ನಾನೊಂದು ತೆರೆದ ಪುಸ್ತಕ ಅವನ ಮುಂದೆ...

'ಗೊತ್ತಿಲ್ಲ  ವಿಶ್ವಾಸ್... ನನ್ನ ಗೊಂದಲಕ್ಕೆ ನೀವು ಪರಿಹಾರ... ಒಬ್ಬಳೇ ಹೇಗೆ ಹೋಗುವುದು ಎಲ್ಲಿಗೆ ಹೋಗುವುದು... ಏನು ಮಾಡುವುದು... ಎಂಬ ಗೊಂದಲಕ್ಕೆ ನೀವು ಪರಿಹಾರ ಎನ್ನುವುದಾದರೆ ನಾನು ಅಷ್ಟೊಂದು ಸ್ವಾರ್ಥಿಯೇ?... ಅಚ್ಚುಕಟ್ಟಾಗಿ ಲೆಕ್ಕಾಚಾರ ಹಾಕುವಷ್ಟು, ಮನುಷ್ಯರನ್ನು ಉಪಯೋಗಿಸಿಕೊಳ್ಳುವಷ್ಟು ಹೃದಯಹೀನಳೇ?... ಇಲ್ಲ ವಿಶ್ವಾಸ್ ನಾನು ಅಂತಹವಳಲ್ಲ... ನನ್ನ ಗೊಂದಲ ಇರುವುದು.. ನಿಮ್ಮನ್ನು ಇದರಲ್ಲಿ ಸಿಕ್ಕಿ ಹಾಕಿಸುತ್ತಿದ್ದೇನಲ್ಲ... ಎಂದು... ಈ ವಯಸ್ಸಿನಲ್ಲಿ, ನಾನಿರುವ ಸ್ಥಿತಿಯಲ್ಲಿ ಪ್ರೀತಿಯಲ್ಲಿ ಬೀಳುವುದು ತಪ್ಪು... ಎಂಬ ವಿವೇಕದೊಂದಿಗೆ ನನ್ನ ಹೃದಯ ಜಗಳವಾಡುತ್ತಿದೆ. ನನ್ನಲ್ಲಿ ಇಲ್ಲದ ಲೆಕ್ಕಾಚಾರವನ್ನು ನನ್ನ ಬುದ್ಧಿಯೇ ನನ್ನ ಮೇಲೆ ಆಪಾದಿಸುತ್ತಿದೆ... ನನ್ನ ಹೃದಯದ ಪ್ರೀತಿಯನ್ನು ನನ್ನ ಬುದ್ಧಿ ಹಾಗೂ ವಾಸ್ತವಿಕ ಅರಿವು ತಳ್ಳಿಹಾಕುತ್ತಿದೆ... ನಿಮ್ಮನ್ನು ಭೇಟಿಯಾಗುವ ಮುನ್ನ ನನ್ನ ಪರಿಸ್ಥಿತಿ ಇದ್ದ ಹಾಗೆಯೇ ಈಗಲೂ ಇದೆ... ಭೇಟಿಯಾಗಿ, ನಿಮ್ಮೊಡನೆ ಮಾತನಾಡುತ್ತಾ ಆಡುತ್ತಾ ನಾನು ಇಷ್ಟು ವರ್ಷಗಳು ಕಳೆದುಕೊಂಡಿದ್ದು ಏನು ಎಂಬ ಅರಿವು ದಟ್ಟವಾಗುತ್ತಾ ಸಾಗಿದೆ... ನೀವೇಕೆ ಬಂದಿರಿ ವಿಶ್ವಾಸ್?.. ನೀವು ಬರದೇ ಹೋಗಿದ್ದರೆ ನನ್ನ ಗಂಡನೊಡನೆ ಜಗಳವಾಡುತ್ತಾ, ಮಕ್ಕಳನ್ನು ನೋಡಿಕೊಳ್ಳುತ್ತಾ ಈ ಬದುಕು ಇಷ್ಟೇ ಎಂದು ಬದುಕಿಬಿಡುತ್ತಿದ್ದೆ. ಆಗಾಗ ಎಲ್ಲವನ್ನು ಬಿಟ್ಟು ಹೋಗಿ ಬಿಡುವ, ಒಂಟಿಯಾಗಿ ಬಾಳಿ ಸಾಧಿಸಿ ಬಿಡುವ ಕನಸು ಕಟ್ಟುತ್ತಾ, ಆ ಕನಸ್ಸಿನಲ್ಲೇ ಸಾಧಿಸಿದ್ದರ ಅನುಭವ ಪಡೆದು ಬದುಕಿಬಿಡುತ್ತಿದೆ. ಅಥವಾ ಎಲ್ಲವನ್ನು ಬಿಟ್ಟು  ಹೋಗಿ ಒಂಟಿಯಾಗಿ ನಿಂತು ಸಾಧಿಸಿ ತೋರಿಸುತ್ತಿದ್ದೆ, ಯಾರೂ ಇಲ್ಲದೆ ನಾನು ಬದುಕಬಲ್ಲೆನು ಎಂದು. ಆದರೆ.. ಆದರೆ ಈಗ ಅದರಲ್ಲೂ ಸಾರ್ಥಕತೆ ಏನೂ ಇಲ್ಲ... ಎನ್ನಿಸತೊಡಗಿದೆ. ನಿಮ್ಮ ಪ್ರೀತಿ... ಅಥವಾ ನಿಮ್ಮಲ್ಲಿ ನನಗಾಗಿ ಇದೆ ಎಂದು ನಾನು ಅಂದುಕೊಂಡಿರುವ ಪ್ರೀತಿ... ನನ್ನಲ್ಲಿ ಭೀತಿ ಹುಟ್ಟಿಸಿದೆ. ಎರಡು ಮಕ್ಕಳು ತಾಯಿ ನಾನು... ನನ್ನಲ್ಲಿ ಏನು ಕಂಡ್ರಿ?... ಅಥವಾ ಅಥವಾ ನಿಮ್ಮ ಕಂಗಳಲ್ಲಿ ಇರುವುದು ಬರೀ ಕರುಣೆಯೇ?..... ನೀವು ಎಲ್ಲರೊಡನೆ ಮಾತಾಡುವುದೇ ಹಾಗೆಯೇ? ಅದೂ ಗೊಂದಲವೇ?...... ನನ್ನ ಮಾತುಗಳೇ ಇವು!..' ದಿಗ್ಭ್ರಾಂತಳಾಗಿ ನಿಂತೆ.

'ಗೊಂದಲವೇನು ಇಲ್ಲ... ಸ್ಪಷ್ಟವಾಗಿಯೇ ಇದೆ ನನ್ನ ಪ್ರೀತಿ... ಆದರೆ ನನ್ನ ಪ್ರೀತಿ ಒಂದು ಕುಟುಂಬವನ್ನು ಒಡೆಯಬಾರದು, ತಾಯಿ ಮಕ್ಕಳನ್ನು ದೂರ ಮಾಡಬಾರದು... ಎಂಬ ಪ್ರಜ್ಞೆಯಿಂದ ಬಳಲುತ್ತಿದೆ ಅಷ್ಟೆ..' ಅವನ ದನಿ ಸ್ಪಷ್ಟ.

'ಹೂಂ.... ಆದರೆ ಇದು ತಪ್ಪಲ್ಲವೇ?' ತಲೆ ಎತ್ತಿ ಅವನತ್ತ ನೋಡಿದೆ. ಆ ಎರಡು ಕಂಗಳು ಆಯಸ್ಕಾಂತಗಳು... ನನ್ನ ಭುಜ ಹಿಡಿದು ಎರಡೂ ಕೈಗಳಿಂದ ನನ್ನ ಬಳಸಿದ ವಿಶ್ವಾಸ್ ನನ್ನ ಎದೆ ಬಡಿತ ಏರಿದರೂ ಹಿತವೆನ್ನಿಸಿ ಅವನೆದೆಯಲ್ಲಿ ಮುಖವಿರಿಸಿದೆ.

'ಪ್ರೀತ್ಸೋದು ಹೇಗೆ ತಪ್ಪು?' ಮರು ಪ್ರಶ್ನೆ ಅವನದು.

'ನೀವು ನನಗೆ ಸಿಗದಿದ್ದರೂ ನಾನು ನಿಮ್ಮನ್ನು ಪ್ರೀತಿಸುತ್ತಲೇ ಇರುವೆ... ತಪ್ಪೇನು?...'

ನಾನು ಪ್ರೀತ್ಸೋದು ತಪ್ಪೇ.... ಅದಕ್ಕೆ ಗೊಂದಲ... ಆದರೆ... ತಲೆ ಎತ್ತಿ ಅವನತ್ತ ನೋಡಿದೆ... ಎಷ್ಟು ಸಮೀಪವಿದೆ ಅವನ ಮುಖ..

'ವಿತ್ ಯುವರ್ ಪರ್ಮಿಷನ್' ಎಂದು... ಏನು ಎಂದು ನನಗೆ ಅರ್ಥವಾಗುವ ಮುನ್ನ ಅವನ ತುಟಿಗಳು ನನ್ನ ತುಟಿಗಳ ಮೇಲಿದ್ದವು... ಬೀಳುವ ಹಾಗೆನ್ನಿಸಿ ಅವನ ಭುಜಗಳನ್ನು ಹಿಡಿದೆ...

ಪರ್ಮಿಷನ್ ಕೊಡಲು ಕೊಡದಿರಲು ನನ್ನ ದೇಹ, ಹೃದಯ ನನ್ನ ಹಿಡಿತದಲ್ಲಿಯೇ ಇಲ್ಲ... ಅವನ ತುಟಿಗಳು ಸ್ಪರ್ಶಿಸಿದ ನನ್ನ ತುಟಿಗಳಲ್ಲಿ ಬೆಂಕಿ... ದೇಹದಲ್ಲಿ ಬಯಕೆಯ ಕಾವು... ಇದು ಪ್ರೇಮವೇ... ಪ್ರೇಮ ಇರುವುದರಿಂದ ಹುಟ್ಟಿರುವ ಕಾಮವೇ... ಅಥವಾ ಬರೀ ಕಾಮವೇ...? ಅವನೆ ಮೊದಲು ಹಿಂದೆ ಸರಿದ.

'ಹೆಚ್ಚು ತಲೆ ಕೆಡಿಸಿಕೊಳ್ಳಬೇಡಿ... ನಿಧಾನವಾಗಿ ಯೋಚನೆ ಮಾಡಿ... ನಾನು, ನಿನ್ನ ಸಹವಾಸ ಬೇಡ... ಇಷ್ಟು ದಿನ ಇದ್ದ ಹಾಗೆ ಇದ್ದುಬಿಡುವುದು ಎಂದು ನೀವು ನಿರ್ಧರಿಸಿದರೆ... ನಾನು ಸುಮ್ಮನೆ ಹೊರಟು ಹೋಗುತ್ತೇನೆ... ಆ

**ಒಡಲು**

ಪ್ರೀತಿಯ ಬೆಳಕು
ಚೆಲ್ಲಿದ ಹಣತೆ
ನನ್ನೊಡಲ ಕವಿತೆ

—ರಾಂಚಂದ್ರ, ಕೊಪ್ಪಲು

